# ದಾವಣಗೆರೆ ವಿಶ್ವವಿದ್ಯಾನಿಲಯ

ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ,ದಾವಣಗೆರೆ-577002

E-mail: registrarevaluation@gmail.com ದೂ.ಸಂಖ್ಯೆ : 08192-208420, 208104


ಸಂಖ್ಯೆ:ದಾವಿ/ಪವಿ/ಯು.ಜಿ/71/2017-18 ದಿನಾಂಕ:18-04-2017

## ಪರಿಷ್ಕೃತ ಪ್ರಕಟಣೆ

ವಿಷಯ:ಮೇ/ಜೂನ್-2017ರಲ್ಲಿ ನಡೆಯುವ ಬಿ.ಎ./ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎಂ/ಬಿ.ಸಿ.ಎ/ ಬಿ.ಎಸ್.ಎ/ ಬಿ.ಎಸ್.ಡಬ್ಲ್ಯು/ಬಿ.ವಿ.ಎ/ಬಿ.ಎಫ್.ಡಿ.(ಸೆಮಿಸ್ಟರ್) ಪರೀಕ್ಷೆಗಳಿಗೆ ಅರ್ಜಿಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ:01)ಈ ಕಛೇರಿ ಪ್ರಕಟಣೆ ಸಂಖ್ಯೆ: ದಾವಿ/ಪವಿ/ಯು.ಜಿ/2449/2017-18 ದಿನಾಂಕ:28-03-2017

02)ಮಾನ್ಯ ಕುಲಪತಿಗಳ ಮೌಖಿಕ ಆದೇಶದ ದಿನಾಂಕ:13-04-2017

*******

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇ/ಜೂನ್-2017ರ ಪ್ರಾಯೋಗಿಕ/ಲಿಖಿತ ಪರೀಕ್ಷೆಗಳ ವಿವರವನ್ನು ಉಲ್ಲೇಖ (01)ರ ಪ್ರಕಟಣೆಯಲ್ಲಿ ನೀಡಲಾಗಿತ್ತು. ಆದರೆ ಕೆಲವು ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ಈ ಕೆಳಗಿನಂತೆ ಪುನಃ ಪ್ರಾಯೋಗಿಕ/ಲಿಖಿತ ಪರೀಕ್ಷೆಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ. ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಕಳುಹಿಸಲಾಗುವುದು.

| ಕ್ರ.ಸಂ | ವಿವರ | ದಿನಾಂಕ |
|---|---|---|
| 01 | ಪ್ರಾಯೋಗಿಕ ಪರೀಕ್ಷೆಗಳು (ಬಿ.ಎಸ್ಸಿ, ಬಿ.ಸಿ.ಎ) ಮುಕ್ತಾಯ | 02-06-2017 |
| 02 | ಪ್ರಾಯೋಗಿಕ ಪರೀಕ್ಷೆಗಳು (ಬಿ.ಎ) ಮುಕ್ತಾಯ | 24-05-2017 |
| 03 | ಲಿಖಿತ ಪರೀಕ್ಷೆಗಳು (ಬಿ.ಎ) ಪ್ರಾರಂಭ | 25-05-2017 |
| 04 | ಲಿಖಿತ ಪರೀಕ್ಷೆಗಳು (ಬಿ.ಎ ಹೊರತು ಪಡಿಸಿ ಉಳಿದ ಕೋರ್ಸುಗಳು) ಪ್ರಾರಂಭ | 03-06-2017 |
| 05 | ಲಿಖಿತ ಬಿ.ಕಾಂ/ಬಿ.ಬಿ.ಎಂ/ಬಿ.ಎಸ್.ಡಬ್ಲ್ಯು ಪ್ರಾರಂಭ | 29-05-2017 |
| 06 | ಬಿ.ಬಿ.ಎಂ ಪ್ರಾಜೆಕ್ಟ್ ಮುಕ್ತಾಯ | 28-05-2017 |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

### ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

| | | |
|---|---|---|
| ದಂಡಶುಲ್ಕವಿಲ್ಲದೆ | ------------------ | **28-03-2017** ರಿಂದ **17-04-2017** ರವರೆಗೆ |
| ದಂಡಶುಲ್ಕ ರೂ.110 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------ | **18-04-2017** ರಿಂದ **24-04-2017** ರವರೆಗೆ |
| ದಂಡಶುಲ್ಕ ರೂ.550 ರಂತೆ ಪ್ರತಿ ಸೆಮಿಸ್ಟರ್‌ಗೆ | ------------------ | **25-04-2017** ರಿಂದ **28-04-2017** ರವರೆಗೆ |

### ಶುಲ್ಕದ ವಿವರಗಳು

1. ಶುಲ್ಕವನ್ನು ನಗದು / ಚೆಕ್ ಮೂಲಕ ವಿದ್ಯಾರ್ಥಿಗಳಿಂದ ನೇರವಾಗಿ ಸ್ವೀಕರಿಸುವುದಿಲ್ಲ. ಆದರೆ ಶುಲ್ಕವನ್ನು ವಿದ್ಯಾರ್ಥಿಗಳಿಂದ ನಗದಾಗಿ ಪಡೆದು ಒಟ್ಟು ಶುಲ್ಕಕ್ಕೆ **ದಿನಾಂಕ:18-04-2017** ರಂದು ಒಂದು ಡಿ.ಡಿ ಯನ್ನು **ದಿನಾಂಕ:25-04-2017**ರಂದು ಮತ್ತೊಂದು ಡಿ.ಡಿ ಯನ್ನು ಹಾಗೂ **ದಿನಾಂಕ:27-04-2017** ರಂದು ಕೊನೆಯ ಡಿ.ಡಿಯನ್ನು ಪಡೆದು ಕುಲಸಚಿವರು(ಪರೀಕ್ಷಾಂಗ) ಇವರಿಗೆ ಪರೀಕ್ಷಾ ಅರ್ಜಿಯೊಂದಿಗೆ ಸಲ್ಲಿಸಬೇಕು. **ಯಾವುದೇ ಕಾರಣಕ್ಕೂ ಚಲನ್ ಮೂಲಕ ಹಣ ಪಾವತಿಸತಕ್ಕದ್ದಲ್ಲ.**

2. ಅಭ್ಯರ್ಥಿಯು ಭರ್ತಿ ಮಾಡಿದ ಪರೀಕ್ಷಾ ಅರ್ಜಿ, ಪ್ರವೇಶ ಪತ್ರ, ಅಭ್ಯರ್ಥಿನಾ ಪಟ್ಟಿ, ಸಲ್ಲಿಸಬೇಕು. ಹಾಗೂ ಪರೀಕ್ಷಾ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯ ನೀಡುವ ಸಾಫ್ಟ್‌ವೇರ್ ಸಿ.ಡಿಯಲ್ಲಿ ದಾಖಲಿಸಿ ಕುಲಸಚಿವರು (ಪರೀಕ್ಷಾಂಗ) ಇವರ ಕಛೇರಿಗೆ ಮೇಲಿನ ಎಲ್ಲಾ ದಾಖಲಾತಿಗಳೊಂದಿಗೆ **ದಿನಾಂಕ:02-05-2017 ರಂದು ಮಂಗಳವಾರ** (ಕಛೇರಿ ವೇಳೆ) ದಾವಣಗೆರೆ ಜಿಲ್ಲಾ ವ್ಯಾಪ್ತಿ ಕಾಲೇಜುಗಳು, ಹಾಗೂ **ದಿನಾಂಕ:03-05-2017 ರಂದು ಬುಧವಾರ** ಚಿತ್ರದುರ್ಗ ಜಿಲ್ಲಾ ವ್ಯಾಪ್ತಿ ಕಾಲೇಜುಗಳು ಕಛೇರಿಯಲ್ಲಿ ಸಲ್ಲಿಸಿ ಸ್ವೀಕೃತಿ ಪಡೆಯಬೇಕು.

3. ಮುದ್ರಿತ ನಮೂನೆಗಳು(ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಯನ್ನು ಸಹ <u>ದಿನಾಂಕ:27-04-2017</u>ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.

ವಿಶೇಷ ಸೂಚನೆ:- 01)2011-12ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅಂತಿಮ ವರ್ಷ ಮೇ/ಜೂನ್-2017 ಆಗಿರುತ್ತದೆ. ನಂತರ ಯಾವುದೇ ಕಾರಣಕ್ಕೂ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡುವುದಿಲ್ಲ.

02) ಉಲ್ಲೇಖ:(1)ರ ಪ್ರಕಟಣೆಯನುಸಾರ ದಂಡ ಶುಲ್ಕ ರೂ.110 ರಂತೆ ಪಾವತಿಸಿದ ಅರ್ಜಿ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡದೇ ವಿದ್ಯಾರ್ಥಿಗಳಿಗೆ ಹಿಂತಿರುಗಿಸಲು ತಿಳಿಸಲಾಗಿದೆ. ಹಾಗೂ ಮೇಲ್ಕಂಡಂತೆ ಹೊರತು ಪಡಿಸಿ ಉಲ್ಲೇಖ (1)ರ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇಲ್ಲದೇ ಯಥಾವತ್ತಾಗಿ ಇರುತ್ತದೆ.

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002

ಆಡಕ:-ಪರೀಕ್ಷಾ ಶುಲ್ಕ ವಿನಾಯಿತಿಗೆ ಸಂಬಂಧಿಸಿದ ಸರ್ಕಾರದ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಇದನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

ಗೆ,

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಎ/ ಬಿ.ಎಸ್ಸಿ /ಬಿ.ಕಾಂ / ಬಿ.ಬಿ.ಎಂ/ಬಿ.ಸಿ.ಎ/ ಬಿ.ಎಸ್.ಎ /ಬಿ.ಎಸ್.ಡಬ್ಲ್ಯು/ ಬಿ.ವಿ.ಎ/ ಬಿ.ಎಫ್.ಟಿ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಕಛೇರಿ ಪ್ರತಿ.